ತುಮಕೂರು ಡಿಸ್ಟ್ರಿಕ್ಟ್.

ತಾರೀಖು 26ನೇ ಜನವರೀ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟ್ ತುಮಕೂರು 8 ತಾಲ್ಲೂಕುಗಳಲ್ಲಿ ಸರಕಾರದ ಜಮ್ಮಿ ವೊಳಗೆ ಯಿರತಕ್ಕ ಕುರಂಗದ ಕಲ್ಲುಗಳನ್ನ ಜಮಾಯಿಸತಕ್ಕ ಹಕ್ಕನ್ನು ಸ್ಯ 1887—88ನೇ ಇಸವಿ ಸರ್ವಜಿತು ಸಂವತ್ಸರಕ್ಕೆ ನೊತ್ರ ಯಿಜಾರೆ ಕೊಡಲು ಸ್ಯ 1887ನೇ ಇಸವಿ ಮಾರ್ಚೀ ತಾರೀಖು ಗರಲ್ಲು ದಿವಿ 11 ಘಂಟೆ ಲಾಗಾಯಿಕು 5 ಘಂಟೆವರಿಗೆ ತುಮಕೂರು ಡಿಸ್ಟ್ರಿಕ್ಟ್ ಆಫಿಸ್ ಬಳಿ ಡೆಪ್ಯೂಟೆಕಮ್ಮಿಷನರ್ ಸಾಹೇಬರವರ ರೂಬರೂವ್ ಅಥವಾ ಹಾಜರಿರುವ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರ ರೂಬರೂಬು ಹರಾಜು ಮಾಡಲ್ಪಡುವದು.

ಷರತ್ತುಗಳು.

1. ಹರಾಜು ಕೈದಾದ ಕೂಡ್ಲೆ ಆಖೈರು ಸವಾಲ್‌ದಾರನು ಶೇಕಡ 25 ರೂಪಾಯಿ ಮೇರಿಗೆ ನಗದು ಶೇವಣಿಯನ್ನು ಇಡಬೇಕು ಹರಾಜು ದಿರ್ವಾಸಾಹೆಬರವರಿಂದ ಮಂಜೂರಾದ ವಡನೇ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರು ಮಾಡಬೇಕು. ಹಾಗೆ ಹಾಜರು ಮಾಡದೆ ತಪ್ಪಿದರೆ ಪುನಹ ಹರಾಜು ಮಾಡಲ್ಪಟ್ಟು ನಷ್ಟಬಂದ ಮೊಬಲಗಿಗೆ ಮೊದಲಿನ ಚಡ್ಡೆ ಸವಾಲ್‌ದಾರನನ್ನು ಗುರಿಮಾಡಲಾದೀತು. ಮತ್ತು ಶೇವಣಿಯನ್ನು ಸರಕಾರಕ್ಕೆ ಶೇರಿಸಿಕೊಳ್ಳಲಾದೀತು.

2. ಕುರಂಗದ ಕಲ್ಲುಗಳನ್ನು ತೆಗಿಯುವ ವುದ್ದಿಶ್ಯ ಭೂಮಿ ಸಾಗುವಳಿಗೆ ನಾಲಾಯಕು ಆಗುವಂತೆ ಮಾಡಕೂಡದು ಗುಂಡಿಗಳನ್ನು ಯಿಜಾರೆದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯಲ್ಲಿ ಕುರಂಗದಕಲ್ಲುಗಳನ್ನು ಹಿಡುವಳೀದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನ ಹುಲ್ಲುಬನ್ನಿ ಮತ್ತು ಸಾಗುವಳಿಗೆ ಕೊಡಲಾದೀತು ಹಾಗೆ ಕೊಡೋಣದರಿಂದ ಕುರಂಗದಕಲ್ಲು ಇಜಾರೆದಾರನಿಗೇನಾದರು ನಷ್ಟವಾದರೆ ಅದಕ್ಕೆ ಸರಕಾರದವರು ಜವಾಬುದಾರರಲ್ಲ.

5. ಹರಾಜು ಮೊಬಲಗಿನ ಮೇಲೆ ಶೇಕಡಾ 6—4—0 ರೂಪಾಯಿ ಮೇರೆ ಲೋಕಲ್‌ಸೆಸ್ಸನ್ನೂ ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ಹೆಚ್ಚು ತಪಸೀಲ್ ತಿಳಿಯಬೇಕಾಗಿದ್ದರೆ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ತಿಳದುಕೊಳ್ಳಬಹುದು.

ಪಿ. ಯ್. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 58.

ಮೃತಪಟ್ಟ ಪುಟ್ಟಣ್ಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶಿದ್ದಲಿಂಗವ್ವ ಮೈನರ್ ಗಾರ್ಡಿಯ್ ತಾಯಿ ಭದ್ರಮ್ಮನು, ಮೃತಪಟ್ಟ ಸದರೀ ಪುಟ್ಟಣ್ಣನವರಿಗೆ ಮಗ ಮೈನರ್ ಸಬಬು ಗಾರ್ಡಿಯ್ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ಸ್ಥಳದ ಸದರೀ ಭದ್ರಮ್ಮನು ಹುಣಸೂರು ತಾಲ್ಲೂಕು ಗೊವಿಂದನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಪುಟ್ಟಣ್ಣನವರ ಜಿಂದಗಿ ಬಗ್ಯಾಗಿ ಬರಬಕ್ಕ 500 ರೂಪಾಯಿ ಸ್ಥಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಭದ್ರಮ್ಮನ ಅರ್ಜಿಯನ್ನು 1887ನೇ ಇಸವಿ ಮಾರ್ಚಿ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 59.

ಮೃತಪಟ್ಟ ಪುಟ್ಟಣ್ಣನವರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ಶಿದ್ದಲಿಂಗವ್ವ ಮೈನರ್ ಗಾರ್ಡಿಯ್ ತಾಯಿ ಭದ್ರಮ್ಮನು ಮೃತಪಟ್ಟ ಸದರೀ ಪುಟ್ಟಣ್ಣನವರಿಗೆ ವೊಮ್ಮಗ ಮೈನರ್ ಸಬಬು ತಾಯಿಗಾರ್ಡಿಯ್ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ಸ್ಥಳದ ಸದರೀ ಭದ್ರಮ್ಮನು ಹುಣಸೂರು ತಾಲ್ಲೂಕು